ಒ ಎಸ್ 97/2019 ಪಿ.ಡಬ್ಲ್ಯೂ 1

ಇಂದು ದಿಃ 23.08.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಮಹದೇವಮ್ಮ ನನ್ನ ಅಜ್ಜಿ. ದಿನೇಶ್ ನನ್ನ ಅಪ್ಪ. ನನ್ನ ಅಜ್ಜಿಗೆ ಕಿವಿ ಕೇಳುವುದಿಲ್ಲ ಎನ್ನುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿದ್ದೇನೆ. ತಂದೆ ಪೊಲೀಸ್ ಆಗಿರುವುದರಿಂದ ನ್ಯಾಯಾಲಯಕ್ಕೆ ಬರಲಾಗುತ್ತಿಲ್ಲ. ನಮ್ಮ ಜಮೀನಿನಲ್ಲಿ 8 ¼ ಜಮೀನನ್ನು ಮರಿನಂಜೇಗೌಡ ಎಂಬುವವರು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ. ಎ ಷೆಡ್ಯೂಲ್ ಆಸ್ತಿ ನಮ್ಮದಾಗಿದ್ದು ಅದರ ಆರ್ ಟಿ ಸಿ ನಮ್ಮ ಹೆಸರಿನಲ್ಲಿರುತ್ತದೆ. ದಾವಾ ಎ ಅನುಸೂಚಿತ ಆಸ್ತಿಯಲ್ಲಿ 22 ಗುಂಟೆ ಯಲ್ಲಿ ನಾವು ಸ್ವಾಧೀನ ಇದ್ದೇವೆ. ಸರ್ವೆ ನಂ. 211/1ಎ8 8ನೇ ಪ್ರತಿವಾದಿ ಶೋಭಾರವರ ಹೆಸರಿನಲ್ಲಿದೆ ಎಂದರೆ ಸರಿ ಆದರೆ ಅವರು ಸ್ವಾಧೀನ ಇರುವುದಿಲ್ಲ. 8ನೇ ಪ್ರತಿವಾದಿ ದಿನಾಂಕ 27.08.2013ರಂದು 1 ರಿಂದ 7ನೇ ಪ್ರತಿವಾದಿಗಳಿಂದ ಖರೀದಿ ಮಾಡಿ ಆ ಲಾಗಾಯಿತಿನಿಂದ ಅವರೇ ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ಆ ಪ್ರಕಾರ ಅವರು ಕಂದಾಯ ಪಾವತಿಸುತ್ತಿದ್ದು ಆರ್ ಟಿ ಸಿ ಯಲ್ಲಿ ಅವರ ಹೆಸರು ನಮೂದು ಇದೆ ಎಂದರೆ ಸರಿಯಲ್ಲ. ನಿಪಿ 9 ರ ಪ್ರಕಾರ ನಮ್ಮ ಆಸ್ತಿ 4 ಮತ್ತು 8 ನೇ ಪೋಡು ಬರುತ್ತಿದೆ ಎಂದರೆ ಎಲ್ಲಾ ಪೋಡುಗಳು ರದ್ದಾಗಿವೆ ಎನ್ನುತ್ತಾರೆ. ಈಗ 211/1ಎ ಎಂದು ಬರುತ್ತಿದೆ 2 ಎಕರೆ 31 ಗುಂಟೆ ಎಂದು ಕಂಡು ಬರುತ್ತದೆ. ದಾವಾ ಆಸ್ತಿಗಳು ಮೂಲತಃ ದೊಡ್ಡ ಬಸವೇಗೌಡರಿಗೆ ಸೇರಿದ ಸ್ವತ್ತು ಎಂದರೆ ಸರಿ. ಬಸವೇಗೌಡರಿಗೆ ಚಿಕ್ಕರಾಚೇಗೌಡ ಮತ್ತು ಬಸವೌಡ ಎಂಬ ಮಕ್ಕಳು. ಚಿಕ್ಕರಾಚೇಗೌಡರಿಗೆ ದೊಡ್ಡ ಮತ್ತು ಚಿಕ್ಕ. ಬಸವೇಗೌಡರಿಗೆ ಮರಿನಂಜೇ ಗೌಡ ಮತ್ತು ತಿಮ್ಮೆಗೌಡ ಎಂಬ ಮಕ್ಕಳು ಎಂದರೆ ಸರಿ.

ಸರ್ವೆ ನಂ. 211ರ 28 ಗುಂಟೆ ಜಮೀನು ಹೊರತುಪಡಿಸಿ ಉಳಿಕೆ ಜಮೀನನ್ನು ದೊಡ್ಡ ಬಸವೇಗೌಡರ ಮಕ್ಕಳು ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. 28 ಗುಂಟೆ ಜಮೀನನ್ನು ದೊಡ್ಡ ಬಸವೇಗೌಡರ ಮಕ್ಕಳು 21.11.2012ರ ನೊಂದಾಯಿತ ವಿಭಾಗ ಪತ್ರದ ಮೂಲಕ ವಿಬಾಗ ಮಾಡಿಕೊಂಡರು ಎಂದರೆ ದಾಖಲೆಗಳ ಮೂಲಕ ಮಾಡಿಕೊಂಡಿದ್ದಾರ ಆದರೆ ಜಾಗ ಇಲ್ಲ ಎನ್ನುತ್ತಾರೆ. ಆ ಪತ್ರದ ಪ್ರಕಾರ 1 ರಿಂದ 7ನೇ ಪ್ರತಿವಾದಿಗಳಿಗೆ 8 ¼ ಭಾಗ ಜಮೀನು ಬಂತು ಎಂದರೆ ವಿಭಾಗ ಮಾಡಿರುವುದು ಸತ್ಯ ಆದರೆ ಜಾಗ ಇಲ್ಲ ಎನ್ನುತ್ತಾರೆ. 1 ರಿಂದ 7ನೇ ಪ್ರತಿವಾದಿಗಳು 8 ¼ ಜಮೀನನ್ನು ಮಾರಾಟ ಮಾಡಿರುವುದು ಸತ್ಯ ಆದರೆ ವಾಸ್ತವಾಗಿ ಜಮೀನು ಇಲ್ಲ ಎನ್ನುತ್ತಾರೆ. ನಮ್ಮ ಹೆಸರಿಗೆ 22 ಗುಂಟೆ ಜಮಿನು 8ನೇ ಪ್ರತಿವಾದಿ ಹೆಸರಿಗೆ 8 ¼ ಗುಂಟೆ ಜಮೀನು ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.